# ನದಿ ತಿರುವು ಯೋಜನೆ ಅನುಷ್ಠಾನ ಸಾಧುವಲ್ಲ

## ಪೇಜಾವರ ಮಠಾಧೀಶ ವಿಶ್ವೇಶತೀರ್ಥ ಸ್ವಾಮೀಜಿ ಅಭಿಪ್ರಾಯ । ರಾಷ್ಟ್ರೀಯ ಕೆರೆ ಸಮ್ಮೇಳನ ಸಮಾರೋಪ ಸಮಾರಂಭ

**ಕನ್ನಡಪ್ರಭ ವಾರ್ತೆ, ಶಿರಸಿ, ನ. 15**

ಪೂರ್ವಾಪರ ಯೋಚಿಸದೇ ನದಿ ತಿರುವು ಯೋಜನೆ ಅನುಷ್ಠಾನ ಸಾಧುವಲ್ಲ, ಸರಿಯಾದ ಅಧ್ಯಯನ ನಡೆಸದೇ ಏಕಾಏಕಿ ನದಿ ತಿರುವು ಯೋಜನೆ ಕೈಗೊಳ್ಳುವ ಅವಸರದ ಪರಿಸ್ಥಿತಿ ಸರಿಯಲ್ಲ ಎಂದು ಪೇಜಾವರ ಮಠಾಧೀಶ ವಿಶ್ವೇಶತೀರ್ಥ ಸ್ವಾಮೀಜಿ ಹೇಳಿದರು.

ಶಿರಸಿ ತಾಲೂಕಿನ ಸೋಂದಾ ಸ್ವರ್ಣವಲ್ಲೀ ಮಠದಲ್ಲಿ ಮೂರು ದಿನಗಳಿಂದ ನಡೆಯುತ್ತಿದ್ದ ರಾಷ್ಟ್ರೀಯ ಕೆರೆ ಸಮ್ಮೇಳನದ ಸಮಾರೋಪ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು. ಉದ್ಯಮ ಅಭಿವೃದ್ಧಿಯೊಂದೇ ಅಭಿವೃದ್ಧಿಯಲ್ಲ, ಉದ್ಯಮ ಅಭಿವೃದ್ಧಿಯ ಭರದಲ್ಲಿ ಪರಿಸರ ಮರೆಯಬಾರದು. ಭ್ರಷ್ಟಾಚಾರ ನಿರ್ಮೂಲನೆ, ಅಂತರಂಗದ ಶುದ್ಧಿಯಾದರೆ ಪರಿಸರ ರಕ್ಷಣೆ ಎನ್ನುವುದು ಬಹಿರಂಗ ಶುದ್ಧಿಯೆನ್ನಿಸಿಕೊಳ್ಳುತ್ತದೆ. ಪರಿಸರ ರಕ್ಷಣೆ ಜನಪ್ರತಿನಿಧಿಗಳು, ಜನಸಾಮಾನ್ಯರು ಹಾಗೂ ಸಂತರ ಸಹಕಾರ ಅತ್ಯಗತ್ಯ. ಸಮಾಜ ಜಾಗ್ರತಗೊಳ್ಳುವುದು ಬಹುಮುಖ್ಯ. ಕೆರೆ ಸಮ್ಮೇಳನದಂತಹ ಸ್ಫೂರ್ತಿದಾಯಕ ಕಾರ್ಯಕ್ರಮಗಳು ಇನ್ನಷ್ಟು ಹೆಚ್ಚೆಳವಾಗಬೇಕು ಎಂದರು.



> ದೇವನದಿ ಗಂಗೆಗೆ ನೂರಾರು ಅಣೆಕಟ್ಟುಗಳನ್ನು ಕಟ್ಟಲಾಗಿದೆ. ಇದರಿಂದಾಗಿ ಸದಾಕಾಲ ಹರಿಯುತ್ತಿದ್ದ ಗಂಗಾನದಿ ನಿಂತುಬಿಟ್ಟಿದ್ದಾಳೆ. ನಗರಗಳ ಕೊಳೆಯೆಲ್ಲ ಗಂಗಾನದಿ ಸೇರುತ್ತಿದೆ. ಈಗ ನದಿ ಶುದ್ಧೀಕರಣ ಕೈಗೊಳ್ಳುವ ತಯಾರಿ ನಡೆದಿದೆ. ಆದರೆ ಅದಕ್ಕೂ ಪೂರ್ವ ಚರಂಡಿ ನೀರು, ಕಾರ್ಖಾನೆಗಳ ತ್ಯಾಜ್ಯ ನದಿಗೆ ಸೇರುವುದನ್ನು ತಡೆಯಬೇಕು.
>
> ■ ಶ್ರೀ ವಿಶ್ವೇಶತೀರ್ಥ ಸ್ವಾಮೀಜಿ, ಪೇಜಾವರ ಮಠ-ಉಡುಪಿ

ಹೊಸ ಕೆರೆಗಳ ನಿರ್ಮಾಣ ಸಮರ್ಪಕವಾಗಿ ಆಗುತ್ತಿಲ್ಲ, ಜತೆ ಜತೆಯಲ್ಲಿ ಈಗ ಇರುವ ಕೆರೆಗಳನ್ನು ಅಭಿವೃದ್ಧಿಗೊಳಿಸುವ ಕಾರ್ಯವೂ ನಡೆಯುತ್ತಿಲ್ಲ, ಮನುಷ್ಯನ ದುರಾಸೆಯ ಕಾರಣದಿಂದಾಗಿ ಕೆರೆಗಳು, ನದಿಗಳನ್ನೆಲ್ಲ ಕಲುಷಿತಗೊಂಡಿದೆ. ದೇವನದಿ ಗಂಗೆಗೆ ನೂರಾರು ಅಣೆಕಟ್ಟುಗಳನ್ನು ಕಟ್ಟಲಾಗಿದೆ. ಇದರಿಂದಾಗಿ ಸದಾಕಾಲ ಹರಿಯುತ್ತಿದ್ದ ಗಂಗಾನದಿ ನಿಂತುಬಿಟ್ಟಿದ್ದಾಳೆ. ನಗರಗಳ ಕೊಳೆಯೆಲ್ಲ ಗಂಗಾನದಿ ಸೇರುತ್ತಿದೆ. ಈಗ ನದಿ ಶುದ್ಧೀಕರಣ ಕೈಗೊಳ್ಳುವ ತಯಾರಿ ನಡೆದಿದೆ. ಆದರೆ ಅದಕ್ಕೂ ಪೂರ್ವದಲ್ಲಿ ನದಿಗೆ ಸೇರುತ್ತಿರುವ ತ್ಯಾಜ್ಯಗಳು, ಚರಂಡಿ ನೀರು, ದೊಡ್ಡ ಉದ್ದಿಮೆಗಳ ತ್ಯಾಜ್ಯ ನದಿಗೆ ಸೇರುವುದನ್ನು ತಡೆಯಬೇಕು. ಅದಿಲ್ಲವಾದರೆ ಶುದ್ಧೀಕರಣ ಎನ್ನುವುದು ವ್ಯರ್ಥ ಎಂದು ಶ್ರೀಗಳು ಅಭಿಪ್ರಾಯಿಸಿದರು.

**ಕೃಷ್ಣನ ಸಂದೇಶ:** ಒಳಗೆ ಅಂತರಂಗ ಮಾಲಿನ್ಯವಾಗುತ್ತಿದ್ದರೆ ಹೊರಗೆ ಬಹಿರಂಗ ವಾತಾವರಣವೂ ಮಾಲಿನ್ಯವಾಗುತ್ತಿದೆ. ಇವನ್ನು ಸರಿಪಡಿಸಬೇಕಾದ ಅಗತ್ಯವಿದೆ. ಯಂತ್ರಗಳು ಹಾಗೂ ತಂತ್ರಗಳಿಂದ ಒಳಗಿನ ಹಾಗೂ ಹೊರಗಿನ ಆವರಣಗಳು ಮಲಿನಗೊಳ್ಳುತ್ತಿವೆ. ಇವನ್ನು ಶುದ್ಧ ಮಾಡಲು ಮಂತ್ರದಿಂದ ಮಾತ್ರ ಸಾಧ್ಯವಿದೆ ಎಂದು ಹೇಳಿದ ಪೇಜಾವರ ಶ್ರೀಗಳು, ನದಿ, ಬೆಟ್ಟ, ಗುಡ್ಡ, ಪ್ರಕೃತಿ, ನಿಸರ್ಗ, ಪ್ರಾಣಿ, ಪಕ್ಷಿ, ಮಾನವನ ಮೇಲೆ ನಿರಂತರ ಅತ್ಯಾಚಾರ, ಆಕ್ರಮಗಳು ನಡೆಯುತ್ತಿವೆ. ಮಾನವನೇ ಈ ಎಲ್ಲ ಅತ್ಯಾಚಾರ-ಆಕ್ರಮಣಗಳನ್ನು ಕೈಗೊಳ್ಳುತ್ತಿರುವುದು ದುರಂತ. ಆರಾಧ್ಯದೈವ ಕೃಷ್ಣ ಪ್ರಕೃತಿ ಪೂಜೆಯನ್ನು ಸಾರಿದವನು. ನಾವು ನಿಂತ ನೆಲ, ಜಲ, ಆಕಾಶವನ್ನು ಪೂಜೆ ಮಾಡಬೇಕು ಎಂದು ಭಗವಂತ ಸಾರಿದ್ದಾನೆ. ಆದರೆ ಹಣದ ದುರಾಸೆಗೆ ಮಾನವ ಬಲಿಯಾಗಿ ತಾನು ನಿಂತ ನೆಲೆಯ ಮೇಲೆ ಆಕ್ರಮಣ ಮಾಡುತ್ತಿದ್ದಾನೆ. ಕೃಷ್ಣನ ಕೊಟ್ಟ ಸಂದೇಶವನ್ನು ಮರೆಯದೇ ನಾವು ಮುಂದುವರಿಸಬೇಕಾದ ಅಗತ್ಯವಿದೆ ಎಂದು ತಿಳಿಹೇಳಿದರು.

**ಕೆರೆಗಳ ಭವಿಷ್ಯ ಮಕ್ಕಳ ಕೈಯಲ್ಲಿ:** ಸ್ವರ್ಣವಲ್ಲೀ ಶ್ರೀ ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿ ಮಾತನಾಡಿ, ದೇಶದ ಭವಿಷ್ಯ, ಪರಿಸರದ ಭವಿಷ್ಯ ಹಾಗೂ ಕೆರೆಗಳ ಭವಿಷ್ಯ ಮಕ್ಕಳ ಕೈಯಲ್ಲಿದೆ. ತಲೆಮಾರಿನಿಂದ ತಲೆಮಾರಿಗೆ ಪರಿಸರ ರಕ್ಷಣೆಯ ಶಿಕ್ಷಣ ಮುಂದುವರಿಯಬೇಕಾದ ಅಗತ್ಯವಿದೆ. ಜಗತ್ತಿನ ಸೃಷ್ಟಿಯಲ್ಲಿ ಸಮತೋಲನವಿದೆ. ಆದರೆ ಮನುಷ್ಯ ಈ ಸಮತೋಲನವನ್ನು ಹಾಳುಮಾಡುತ್ತಿದ್ದಾನೆ. ಮನುಷ್ಯನ ದುರಾಸೆಗೆ ಜೀವವೈವಿಧ್ಯ, ಸಸ್ಯವೈವಿಧ್ಯಗಳು ನಾಶವಾಗುತ್ತಿವೆ. ಅಭಿವೃದ್ಧಿ, ನಗರೀಕರಣ, ಯೋಜನೆಗಳ ಹೆಸರಿನಲ್ಲಿ ಪ್ರಕೃತಿಯ ಸಮತೋಲನ ಕಳೆದುಹೋಗುತ್ತಿದೆ. ಸಮತೋಲನವನ್ನು ಹಾಳುಮಾಡುವ ಪ್ರವೃತ್ತಿಗೆ ಕಡಿವಾಣ ಹಾಕಬೇಕಾದ ಅಗತ್ಯವಿದೆ. ಕೆರೆ, ಪರಿಸರ ಉಳಿಸಿದರೆ ಸಮಸ್ಯೆಗಳು ಪರಿಹಾರವಾಗುತ್ತದೆ. ರಾಜ್ಯ-ರಾಜ್ಯಗಳ ನಡುವಣ ಸಂಘರ್ಷಗಳಿಗೂ ಇದು ಉತ್ತರವಾಗಬಲ್ಲದು ಎಂದರು.

ವೃಕ್ಷ-ಲಕ್ಷ ಪ್ರಶಸ್ತಿ ಪಡೆದ ಸ್ವಾಮಿ ವಿಷ್ಣುಮಯಾನಂದರು ಸಾಂದರ್ಭಿಕವಾಗಿ ಮಾತನಾಡಿದರು. ಸ್ವಾಮಿ ವಿಷ್ಣುಮಯಾನಂದರನ್ನು ಸ್ವರ್ಣವಲ್ಲೀ ಶ್ರೀಗಳು 'ಸ್ವಾಮಿ ವೃಕ್ಷಮಯಾನಂದ' ಎಂಬ ಬಿರುದು ನೀಡಿ ಗೌರವಿಸಿದರು. ವಿ. ಎನ್. ಹೆಗಡೆ ಬೊಮ್ನಳ್ಳಿ ಅಧ್ಯಕ್ಷತೆ ವಹಿಸಿದ್ದರು. ಯುವ ಪರಿಸರ ವಿಜ್ಞಾನಿ ಪ್ರಶಸ್ತಿ, ಪರಿಸರ ತಜ್ಞ, ಸಹ್ಯಾದ್ರಿ ಪರಿಸರ ಪ್ರಶಸ್ತಿಗಳನ್ನು ವಿತರಣೆ ಮಾಡಲಾಯಿತು. ಪರಿಸರವಾದಿ ಸುರೇಶ ಹೆಬ್ಳೀಕರ್, ವೃಕ್ಷಲಕ್ಷ ಆಂದೋಲನದ ಸಂಚಾಲಕ ಅನಂತ ಹೆಗಡೆ ಅಶೀಸರ, ಭಾರತೀಯ ವಿಜ್ಞಾನ ಸಂಸ್ಥೆಯ ಹಿರಿಯ ವಿಜ್ಞಾನಿ ಟಿ.ವಿ. ರಾಮಚಂದ್ರ ಉಪಸ್ಥಿತರಿದ್ದರು.

### ಕೆರೆ ಸೇರುವ ನೀರು ವಿಷವಾಗುತ್ತಿದೆ

ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಡಾ. ವಾಮನ ಆಚಾರ್ಯ ಮಾತನಾಡಿ, ಜೀವನ ನಿಂತ ನೀರಾಗಬಾರದು. ಆದರೆ ನೀರು ಮಾತ್ರ ಹರಿಯುವ ಮುನ್ನ ನಿಂತು ನಿಂತು ಹರಿಯಬೇಕು. ಇದರಿಂದ ಅಂತರ್ಜಲ ಮಟ್ಟ ಸಮೃದ್ಧವಾಗುತ್ತದೆ. ಕೆರೆಗಳನ್ನು ಸೇರುವ ನೀರು ವಿಷವಾಗುತ್ತಿದೆ. ನಗರದ ಕೆರೆಗಳಂತೂ ವಿಷದ ಗುಂಡಿಗಳಾಗಿ ಬದಲಾಗಿವೆ. ಕೆಲವು ಕಡೆಗಳಲ್ಲಿ ಹಳ್ಳಿಗಳಲ್ಲಿರುವ ಕೆರೆಗಳ ನೀರೂ ಕೂಡ ಕಲುಷಿತವಾಗುತ್ತಿದೆ. ಇದರ ಪರಿಹಾರಕ್ಕಾಗಿ ಕೆರೆಗಳಿಗೆ ಬಂದು ಸೇರುವ ನೀರಿನ ದಾರಿಗಳನ್ನು ಸರಿಪಡಿಸಬೇಕು. ಸಹಜವಾಗಿ ನೀರು ಹರಿದುಬರುವಂತೆ ಮಾಡಬೇಕು. ಹರಿದು ಬರುವ ನೀರು ಶುದ್ಧವಾಗಿರಬೇಕು ಎಂದು ತಿಳಿಸಿದರು. ಒಂದು ನದಿ ಬತ್ತಲು ಹೇಗೆ 15 ವರ್ಷಗಳು ಹಿಡಿಯುತ್ತವೋ ಅದೇ ರೀತಿ ಒಂದು ನದಿಯನ್ನು ಪುನರುಜ್ಜೀವನಗೊಳಿಸಲೂ 15 ವರ್ಷಗಳೇ ಬೇಕಾಗುತ್ತದೆ. ಕೆರೆಗಳ ಪುನರುಜ್ಜೀವನಕ್ಕೆ ಸಹನೆ ಅತ್ಯಗತ್ಯ ಎಂದರು.

